ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ,ಶೇಷಾದ್ರಿ ರಸ್ತೆ, ಬೆಂಗಳೂರು-560 001.

ದೂರವಾಣಿ- 080-22224212

**ಸಂಖ್ಯೆ.** DPAR 07 CHULOSA (MC) 2024 **ದಿನಾಂಕ:** 27.04.2024

## ಸಾರ್ವತ್ರಿಕ ಲೋಕಸಭಾ ಚುನಾವಣೆ-2024
## ಮತ್ತು ಉಪ ಚುನಾವಣೆ 36-ಸುರಪುರ ವಿಧಾನಸಭಾ ಕ್ಷೇತ್ರ-2024
## ಪತ್ರಿಕಾ ಪ್ರಕಟಣೆ

1. **ಕ್ರ.ಸಂ 22- ಚಾಮರಾಜನಗರ ಲೋಕಸಭಾ ಕ್ಷೇತ್ರದ ಕ್ರ.ಸಂ 221 ಹನೂರು ವಿಧಾನಸಭಾ ಕ್ಷೇತ್ರ, ಮತಗಟ್ಟೆ ಸಂಖ್ಯೆ 146, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇಂಡಿಗನತ್ತ ಗ್ರಾಮದ ಮತಗಟ್ಟೆಯಲ್ಲಿ ಮರು ಮತದಾನ:**

   ದಿನಾಂಕ: 26.04.2024 ರಂದು ಕ್ರ.ಸಂ: 22- ಚಾಮರಾಜನಗರ ಲೋಕಸಭಾ ಕ್ಷೇತ್ರದ ಕ್ರ.ಸಂ 221 ಹನೂರು ವಿಧಾನಸಭಾ ಕ್ಷೇತ್ರದ ಮತಗಟ್ಟೆ ಸಂಖ್ಯೆ 146, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇಂಡಿಗನತ್ತ ಗ್ರಾಮದ ಮತಗಟ್ಟೆಯಲ್ಲಿ ನಡೆದ ಘಟನೆಯಿಂದಾಗಿ ಭಾರತ ಚುನಾವಣಾ ಆಯೋಗ ಮತದಾನವನ್ನು ಅನೂರ್ಜಿತಗೊಳಿಸಿ ಮರು ಮತದಾನದಕ್ಕೆ ಆದೇಶಿಸಿದೆ. 22-ಚಾಮರಾಜನಗರ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿಗಳು ಮತ್ತು ಆಯೋಗ ನಿಯೋಜಿತ ಸಾಮಾನ್ಯ ವೀಕ್ಷಕರು ಸಲ್ಲಿಸಿದ ವರದಿಗಳ ಆಧಾರದ ಮೇಲೆ ಮತ್ತು ಎಲ್ಲಾ ಸಂಬಂಧಿತ ಸಂದರ್ಭಗಳನ್ನು ಪರಿಗಣಿಸಿದ ನಂತರ, ಭಾರತದ ಚುನಾವಣಾ ಆಯೋಗವು ಪ್ರಜಾ ಪ್ರಾತಿನಿಧ್ಯ ಕಾಯ್ದೆ 1951ರ ಸೆಕ್ಷನ್ 58 (2) ಮತ್ತು 58A (2) ಪ್ರಕಾರ, ಮತ್ತು **ದಿನಾಂಕ:** 29.04.2024 (ಸೋಮವಾರ) ರಂದು ಬೆಳಿಗ್ಗೆ 07:00 ಗಂಟೆಯಿಂದ ಸಂಜೆ 06:00 ರವರೆಗೆ ಮರು ಮತದಾನವನ್ನು ಅಧ್ಯಾಯ 13ರ ಚುನಾವಣಾಧಿಕಾರಿಗಳ ಕೈಪಿಡಿ, 2023ರ ಪ್ರಕಾರ ಸದರಿ ಮತಗಟ್ಟೆಯಲ್ಲಿ ಮರು ಮತದಾನವನ್ನು ನಿಗಧಿಡಪಡಿಸಿ ಆಯೋಗ ಆದೇಶಿಸಿದೆ.

   (ಮಾಧ್ಯಮಗಳು ಯಾವುದೇ ವೆಚ್ಚವಿಲ್ಲದೆ ಈ ವಿಷಯದ ಬಗ್ಗೆ ವ್ಯಾಪಕ ಪ್ರಚಾರವನ್ನು ನೀಡಬೇಕೆಂದು ವಿನಂತಿಸಲಾಗಿದೆ)

2. **ಚುನಾವಣಾ ವೆಚ್ಚದ ಮೇಲ್ವಿಚಾರಣೆ :**

   **ಜಪ್ತಿ:**

**ಮೌಲ್ಯ ರೂ. ಕೋಟಿಯಲ್ಲಿ**

| ಜಪ್ತಿ ಮಾಡಲಾದ ವಸ್ತುಗಳು | | | ಪೊಲೀಸ್/ ಕ್ಷಿಪ್ರ ಪಡೆಗಳು (FST)/ ಸ್ಥಿರ ಕಣ್ಗಾವಲು ತಂಡಗಳು(SST)/ | | ಅಬಕಾರಿ | | ಆದಾಯ ತೆರಿಗೆ | | ವಾಣಿಜ್ಯ ತೆರಿಗೆ | | ಒಟ್ಟು ಮೊತ್ತ | |
|---|---|---|---|---|---|---|---|---|---|---|---|---|
| | | | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು |
| ನಗದು | | ಮೌಲ್ಯ | 0.05 | 69.07 | - | - | - | 24.85 | - | - | 0.05 | 93.93 |
| ಮದ್ಯ | | Qty (in lakhs ltrs) | 0.00520 | 0.20 | 0.01 | 147.11 | - | - | - | - | 0.02 | 147.31 |
| | | ಮೌಲ್ಯ | 0.00661 | 0.82 | 0.05 | 177.46 | - | - | - | - | 0.06 | 178.28 |
| ಡ್ರಗ್ಸ್ | | Qty (KGs) | - | 474.91 | - | 73.26 | - | - | - | - | - | 548.17 |
| | | ಮೌಲ್ಯ | - | 11.07 | - | 0.29 | - | - | - | - | - | 11.36 |
| ಅಮೂಲ್ಯ ಲೋಹ | ಚಿನ್ನ | Qty (KGs) | - | 70.58 | - | - | - | 30.37 | - | 36.31 | - | 137.25 |
| | | ಮೌಲ್ಯ | - | 43.22 | - | - | - | 20.02 | - | 13.51 | - | 76.75 |
| | ಬೆಳ್ಳಿ | Qty (KGs) | - | 294.78 | - | - | - | - | - | 7.59 | - | 302.37 |
| | | ಮೌಲ್ಯ | - | 1.12 | - | - | - | - | - | 0.06 | - | 1.18 |
| | ವಜ್ರ | Qty (carat) | - | - | - | - | - | 47.23 | - | - | - | 47.23 |
| | | ಮೌಲ್ಯ | - | - | - | - | - | 1.22 | - | - | - | 1.22 |
| ಉಚಿತ ಉಡುಗೊರೆ | | ಮೌಲ್ಯ | - | 2.41 | - | - | - | - | - | 6.23 | - | 8.64 |
| ಇತರೆ | | ಮೌಲ್ಯ | - | 12.22 | - | 0.03 | - | - | - | 60.31 | - | 72.55 |
| ಒಟ್ಟು ಮೊತ್ತ | | | **0.05** | **139.93** | **0.05** | **177.78** | **-** | **46.09** | **-** | **80.11** | **0.11** | **443.91** |

3. **ದಾಖಲಾದ ಪ್ರಕರಣಗಳ ಕುರಿತು ಮಾಹಿತಿ:**
   - **a.** ಕ್ಷಿಪ್ರಪಡೆಗಳು (**FS**), ಸ್ಥಿರ ಕಣ್ಗಾವಲು ತಂಡಗಳು (**SST**) ಮತ್ತು ಪೊಲೀಸ್ ಅಧಿಕಾರಿಗಳು ನಗದು, ಮದ್ಯ, ಡ್ರಗ್ಸ್, ಬೆಲೆಬಾಳುವ ಲೋಹ ಮತ್ತು ಉಚಿತ ಉಡುಗೊರೆ (**Freebies**) ವಶಪಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ **2,197** ಎಫ್ಐಆರ್‌ಗಳನ್ನು ದಾಖಲಿಸಿದ್ದಾರೆ.
   - **b.** ಅಬಕಾರಿ ಇಲಾಖೆ ಘೋರ ಅಪರಾಧ ಅಡಿಯಲ್ಲಿ **3,153** ಪ್ರಕರಣಗಳನ್ನು ದಾಖಲಿಸಿದೆ, ಪರವಾನಗಿ ಉಲ್ಲಂಘನೆ ಅಡಿಯಲ್ಲಿ **4,927** ಪ್ರಕರಣ ದಾಖಲಿಸಿದೆ. NDPS ಅಡಿಯಲ್ಲಿ **180** ಪ್ರಕರಣಗಳನ್ನು ಮತ್ತು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಸೆಕ್ಷನ್ 15(a) ಅಡಿಯಲ್ಲಿ **29,036** ಪ್ರಕರಣಗಳನ್ನು ದಾಖಲಿಸಿದೆ, ಮತ್ತು **1,945** ವಿವಿಧ ರೀತಿಯ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

4. **ಸಾರ್ವಜನಿಕ ಕುಂದು ಕೊರತೆ ಪರಿಹಾರ:**
   ಮತದಾರರ ಸಹಾಯವಾಣಿಯ ಮೂಲಕ ಸ್ವೀಕರಿಸಿದ **35,340** ಕರೆಗಳ ಪೈಕಿ **35,029** ಜನರ ಮಾಹಿತಿಯನ್ನು ಕೋರಿದ್ದಾರೆ, **39** ನಾಗರೀಕರು ಪ್ರತಿಕ್ರಿಯೆ ನೀಡಿದ್ದಾರೆ, **35** ಮತದಾರರು ಸಲಹೆಗಳನ್ನು ನೀಡಿದ್ದಾರೆ ಮತ್ತು **237** ನಾಗರೀಕರು ದೂರುಗಳನ್ನು ದಾಖಲಿಸಿದ್ದಾರೆ. ಒಟ್ಟು **35,340** ಕರೆಗಳನ್ನು ವಿಲೇವಾರಿ ಮಾಡಲಾಗಿದೆ. ಹೆಚ್ಚುವರಿಯಾಗಿ NGRS ಪೋರ್ಟಲ್‌ನಲ್ಲಿ **19,860** ನಾಗರೀಕರಿಂದ ದೂರುಗಳನ್ನು ದಾಖಲಿಸಲಾಗಿದೆ, ಅದರಲ್ಲಿ **18,248** ದೂರುಗಳನ್ನು ವಿಲೇವಾರಿ ಮಾಡಲಾಗಿದೆ.

5. **ಸಿವಿಜಿಲ್ (cVIGIL):**
   cVIGIL ಅಪ್ಲಿಕೇಶನ್ ಮೂಲಕ **28,819** ದೂರುಗಳನ್ನು ಸ್ವೀಕರಿಸಲಾಗಿದೆ. ಸ್ವೀಕರಿಸಿದ ಪ್ರಮುಖ **16,799** ದೂರುಗಳು ಅನುಮತಿಯಿಲ್ಲದ ಪೋಸ್ಟರ್‌ಗಳು/ಬ್ಯಾನರ್‌ಗಳಿಗೆ ಸಂಬಂಧಿಸಿವೆ, **1,129** ಕಡ್ಡಾಯ ಘೋಷಣೆ ಇಲ್ಲದ ಪೋಸ್ಟರ್‌ಗಳು, ಆಸ್ತಿ ವಿರೂಪಗೊಳಿಸುವಿಕೆ **342,** ಹಣವಿತರಣೆ **254**, ಉಡುಗೊರೆಗಳು/ಕೂಪನ್‌ಗಳ ವಿತರಣೆ **144,** ನಿಷೇಧದ ಅವಧಿಯಲ್ಲಿ ಪ್ರಚಾರ **70**, ಮದ್ಯಹಂಚಿಕೆ **156,** ಅನುಮತಿಯಿಲ್ಲದೆ ವಾಹನ ಬೆಂಗಾವಲು **135**, ಧಾರ್ಮಿಕ ಅಥವಾ ಸಮುದಾಯಿಕ ಭಾಷಣಗಳು/ಸಂದೇಶಗಳು **85,** ಬಂದೂಕುಗಳ ಪ್ರದರ್ಶನ ಬೆದರಿಕೆ **64,** ಇತರೆ **27,172** ಇವುಗಳಲ್ಲಿ ದೂರುಗಳು ಸರಿಯಾಗಿವೆ ಎಂದು ಕಂಡುಹಿಡಿದು ಸೂಕ್ತಕ್ರಮ ಕೈಗೊಳ್ಳಲಾಗಿದೆ.

6. **ಮಾಧ್ಯಮ (Media):**
   ಇಮೇಲ್ ಮೂಲಕ ಸ್ವೀಕರಿಸಿದ **329** ದೂರುಗಳು ಮತ್ತು ಪತ್ರಗಳ ಮೂಲಕ ಸ್ವೀಕರಿಸಿದ **832** ದೂರುಗಳು ಸುದ್ದಿ ಪತ್ರಿಕೆಗಳು ಮೂಲಕ ಸ್ವೀಕರಿಸಿದ **35** ದೂರುಗಳು, ಟಿವಿ ಚಾನೆಲ್‌ಗಳ ಮೂಲಕ ಸ್ವೀಕರಿಸಿದ **77** ದೂರುಗಳು ಮತ್ತು ಸಾಮಾಜಿಕ ಜಾಲತಾಣ ಮಾಧ್ಯಮ ಮೂಲಕ ಸ್ವೀಕರಿಸಿದ **75** ದೂರುಗಳು ಹೀಗೆ ಒಟ್ಟು ಸ್ವೀಕರಿಸಿದ **1,348** ದೂರುಗಳ ಪೈಕಿ **1,348** ದೂರುಗಳನ್ನು ವಿಲೇವಾರಿ ಮಾಡಲಾಗಿದೆ

7. **ಸುವಿಧಾ (SUVIDHA):**
   ಸುವಿಧಾ ಅಡಿಯಲ್ಲಿ ಅನುಮತಿಗಳಿಗಾಗಿ, **9,916** ಅರ್ಜಿಗಳು ಸ್ವೀಕರಿಸಲಾಗಿದೆ, ಅದರಲ್ಲಿ **8,061** ಅರ್ಜಿಗಳನ್ನು ಅಂಗೀಕರಿಸಲಾಗಿದೆ ಮತ್ತು **1,298** ಅರ್ಜಿಗಳನ್ನು ತಿರಸ್ಕರಿಸಲಾಗಿದೆ. **20** ಅರ್ಜಿಗಳು ಪ್ರಗತಿಯಲ್ಲಿದೆ. **183** ಅರ್ಜಿಗಳು ಬಾಕಿ ಉಳಿದಿವೆ ಮತ್ತು **354** ಅರ್ಜಿಗಳನ್ನು ರದ್ದುಗೊಳಿಸಲಾಗಿದೆ.

*********